

## ನಗುವುದೋ ಅಳುವುದೋ

ನಮ್ಮೂರಿನಲ್ಲೊಂದು ಸ್ಟೌ ರಿಪೇರಿ ಅಂಗಡಿ. ಅದರ ಮಾಲೀಕರು ಒಂದು ರಾಜಕೀಯ ಪಕ್ಷದ ಮುಂದಾಳು. ಅವರು ಅದೊಂದು ದಿನ ಪಕ್ಷದ ಕಾರ್ಯಕರ್ತರೊಂದಿಗೆ ಚುನಾವಣಾ ಪ್ರಚಾರಾರ್ಥ ಕೇರಿಯೊಂದಕ್ಕೆ ತೆರಳಿದ್ದರು. ಅಲ್ಲಿನ ಮಹಿಳೆಯೊಬ್ಬಳು ಇವರನ್ನು ಕಂಡು ಖುಷಿಯಾದಳು. 'ಬನ್ನಿ ಬನ್ನಿ. ನೀವು ಬಂದದ್ದು ಒಳ್ಳೆಯದಾಯ್ತು. ನಮ್ಮ ಸ್ಟೌ ಹಾಳಾಗಿ 2 ದಿನ ಆಯ್ತು. ಅದರ ರಿಪೇರಿಗೆ ನಿಮ್ಮಲ್ಲಿಗೇ ಬರಬೇಕೆಂತ ಮಾಡಿದ್ದೆ. ಮಳೆಯಿಂದಾಗಿ ಆಗಲೇ ಇಲ್ಲ. ಹೇಗೂ ಇಲ್ಲಿಗೆ ಬಂದಿದ್ದೀರಲ್ಲ. ಅದನ್ನೊಮ್ಮೆ ನೋಡಿ ರಿಪೇರಿ ಮಾಡಿಕೊಡಿ' ಎನ್ನುತ್ತ ಸ್ಟೌ ತರಲು ಒಳಗೆ ಹೋದಳು. ಅವರೊಂದಿಗೆ ಬಂದಿದ್ದ ಪಕ್ಷದ ಕಾರ್ಯಕರ್ತರಿಗೆ ನಗುವುದೋ ಅಳುವುದೋ ತಿಳಿಯದೆ ಪರಸ್ಪರ ಮುಖ ನೋಡುತ್ತ ನಿಂತಿದ್ದರು!

**ಪಿ. ಜಯವಂತ ಪೈ, ಕುಂದಾಪುರ**

## ಪರಿಹಾರ

ಕಳೆದ ಶತಮಾನದ ಅರವತ್ತರ ದಶಕದಲ್ಲಿ ರೀಜನಲ್ ಎಂಜಿನಿಯರಿಂಗ್ ಕಾಲೇಜು ಸುರತ್ಕಲ್‌ನಲ್ಲಿ ತಲೆ ಎತ್ತಿತ್ತು. ವಿದ್ಯಾರ್ಥಿಗಳ ವಾಸಕ್ಕೆ ಒಂದು ಬಹುಮಹಡಿ ಹಾಸ್ಟೇಲ್ ನಿರ್ಮಾಣಗೊಂಡಿತು. ವಿಷಾದದ ವಿಷಯವೇನಂದರೆ, ಕೊನೆ ಮಹಡಿಯ ರೂಮುಗಳು ಮಳೆಗಾಲ ಮುಗಿಯುವವರೆಗೆ ಸೋರುತ್ತಿದ್ದವು. ಆ ರೂಮಿನ ವಿದ್ಯಾರ್ಥಿಗಳ ಪಾಡು ದೇವರಿಗೇ ಪ್ರೀತಿ. ಇದರಿಂದ ಬೇಸತ್ತ ವಿದ್ಯಾರ್ಥಿಗಳು, ಒಂದು ದಿನ ಪ್ರಿನ್ಸಿಪಾಲರನ್ನು ಭೇಟಿ ಮಾಡಿ ತಮ್ಮ ಸಮಸ್ಯೆಗೆ ಪರಿಹಾರ ಕೋರಿದರು.'ಇದೊಳ್ಳೆ ಕತೆಯಾಯಿತಲ್ಲ. ರೂಮುಗಳು ಮಳೆಗಾಲ್ದಾಗ ಸೋರ್ದ, ಬ್ಯಾಸಗಿಯಾಗ ಸೋರ್ತಾವೇನು? ಮಳೆಗಾಲ ಮುಗಿಯೋ ಮಟ್ಟ ತುಸು ಹೊಂದಾಣಿಕೆ ಮಾಡ್ಕೋಬೇಕು' ಎಂದು ಪ್ರಿನ್ಸಿಪಾಲರು ಪರಿಹಾರ ಸೂಚಿಸಿದರು. ಅವರ ಮಾತಿಗೆ ವಿದ್ಯಾರ್ಥಿಗಳು ಸುಸ್ತೋ ಸುಸ್ತು.

**ಡಾ. ರುದ್ರಯ್ಯ ವಿ., ಗದಗ**



ಚಿತ್ರಗಳು: ಗಣೇಶ ಆಚಾರ್ಯ